ಡಾ. ಪ್ರಾಣಜೀವನದಾಸ್ ಅವರಿಂದ ಗಾಂಧಿಯವರಿಗೊಂದು ಸಂದೇಶ ಬಂತು. ಪ್ರಾಣಜೀವನದಾಸ್ ಅವರಿಗೆ ಗಾಂಧೀಜಿಯೆಂದರೆ ಪ್ರಾಣ. ಅವರು ಕಳಿಸಿದ ಸಂದೇಶವಾದರೂ ಏನು?

ಕಸ್ತೂರ್‌ಬಾಗೆ ನೆನಪೇ ನೋವುಮುಳ್ಳಾಯಿತು.
ಮುಳ್ಳುಗಳ ನಡುವಿನ ಹೂವು ಬೇವಾಯಿತು.
ಬೇವು, ಬೆಲ್ಲವನ್ನು ನುಂಗುವ ಹಾವಾಯಿತು.
ಕೂತಲ್ಲೇ ಕಂಪಿಸಿದರು ಕಸ್ತೂರ್ ಬಾ
ಆದರೂ ನೆನಪಿನಲ್ಲಿ ಬಂಧಿಯಾದರು.

ಡಾ. ಪ್ರಾಣಜೀವನದಾಸ್ ಗಾಂಧಿಯವರಿಗೆ ಕಳಿಸಿದ ಸಂದೇಶ ಸಕಾರಾತ್ಮಕವೇ ಆಗಿತ್ತು. ಆದರೆ ಸಂಸಾರಕ್ಕೆ ನಕಾರಾತ್ಮಕವಾಗಿ ರೂಪಾಂತರಗೊಂಡಿತು. ಅವರು ಹೇಳಿದ್ದು ಇಷ್ಟೇ: 'ಗಾಂಧೀಜಿ, ನಿಮ್ಮ ಒಬ್ಬ ಮಗ ಮತ್ತು ನಿಮ್ಮ ಆಶ್ರಮದ ಇನ್ನೊಬ್ಬ ವಿದ್ಯಾಕಾಂಕ್ಷಿಯನ್ನು ಉನ್ನತವ್ಯಾಸಂಗಕ್ಕೆ ಇಂಗ್ಲೆಂಡಿಗೆ ಕಳಿಸಿಕೊಡಿ. ಅವರ ವಿದ್ಯಾಭ್ಯಾಸದ ಪೂರ್ಣ ವೆಚ್ಚವನ್ನು ನಾನು ಭರಿಸುತ್ತೇನೆ.'

ಈ ವಿಷಯ ಕೇಳಿದ ಹರಿಲಾಲ್‌ನ ಬಯಕೆಬಳ್ಳಿಯ ಮೊಗ್ಗುಗಳು ಅರಳಿದವು. ಅಮ್ಮನ ಬಳಿ ತನ್ನ ಬಯಕೆಯನ್ನು ಹೇಳಿಕೊಂಡ. ಅಮ್ಮ ಕಸ್ತೂರ್‌ಬಾ ಗಾಂಧೀಜಿಯವರಿಗೆ ತಿಳಿಸಿದರು. ಆದರೆ ಗಾಂಧಿಯವರ ಚಿಂತನೆ ಬೇರೆಯೇ ಆಗಿತ್ತು. ಆಪ್ತರಾದ ಪ್ರಾಣಜೀವನದಾಸ್ ಅವರ ಸಹಾಯವನ್ನು ತನ್ನ ಮಗನ ಶೈಕ್ಷಣಿಕ ಜೀವನಕ್ಕೆ ಬಳಸಿಕೊಂಡರೆ ದಾಕ್ಷಿಣ್ಯಕ್ಕೆ ದಾಸರಾಗುವುದಿಲ್ಲವೆ ಎಂಬ ಪ್ರಶ್ನೆ ಅವರನ್ನು ಕಾಡಿತ್ತು. ತನ್ನ ಮಗನ ಬದಲು ತಮ್ಮದೇ ದೂರದ ಸಂಬಂಧಿಗೆ ಸಹಾಯ ಮಾಡಬಾರದೇಕೆ ಎಂದು ಯೋಚಿಸಿ ತೀರ್ಮಾನದತ್ತ ಸಾಗಿದ್ದರು. ದೂರದ ಬಂಧುವನ್ನು ಕಳಿಸುವುದರಿಂದ ಪ್ರಾಣಜೀವನದಾಸ್ ಅವರ ಬಯಕೆಗೂ ಸಮೀಪವಾದಂತಾಗುತ್ತದೆ ಎಂಬ ಲೆಕ್ಕಾಚಾರ ಅವರದಾಗಿತ್ತು. ಆದರೆ ಕಸ್ತೂರ್‌ಬಾ ಮಗನ ಪರವಾಗಿದ್ದರು. ಗಾಂಧಿ ಬಳಿಗೆ ಬಂದರು. 'ಇಂಗ್ಲೆಂಡ್ ವಿಷ್ಯ ಏನ್ ಮಾಡಿದ್ರಿ?' ಎಂದು ಕೇಳಿದರು.

ಗಾಂಧಿ ಏನೂ ಆಗಿಲ್ಲವೆಂಬಂತೆ 'ಯಾವ ವಿಷ್ಯ?' ಎಂದು ಕೇಳಿದರು.

'ಅದೇ ನಿಮ್ ಸ್ನೇಹಿತರು ಸಹಾಯ ಮಾಡ್ತಾರೆ ಅಂದ್ರಲ್ಲ; ಅವ್ರ್ ಹತ್ರ ಹರಿಲಾಲ್‌ನನ್ನೇ ಕಳಸ್ಕೊಡಿ. ಅವನಿಗೆ ನಿಮ್ಮ ಹಾಗೇ ಬ್ಯಾರಿಸ್ಟರ್ ಆಗೋ ಆಸೆ ಇದೆ.'

'ನಾನೊಬ್ಬ ಬ್ಯಾರಿಸ್ಟರ್ ಆಗಿರೋದೇ ಸಾಕು. ಅವ್ನಿಗೆ ಈ ಆಶ್ರಮಾನೇ ಶಿಕ್ಷಣ ಕೇಂದ್ರ.'

'ಯಾಕೆ ಹಾಗೆ ಹಟ ಮಾಡ್ತೀರ? ಆಶ್ರಮದ ಶಿಕ್ಷಣದಲ್ಲಿ ಅವನ ಆಸೆ ಈಡೇರಲ್ಲ?'

'ಅವನಿಗೆ ಆಸೆ ಇದೆ ಅಂತ ನಾನು ಇನ್ನೊಬ್ಬರ ಸಹಾಯಾನ ನನ್ನ ಮಗನಿಗೆ ಬಳಸೊಲ್ಲ.'

'ನಿಮ್ಮದು ಅತಿಯಾಯ್ತು. ನಮ್ಮ ಮಕ್ಕಳು ಚೆನ್ನಾಗಿ ಬೆಳೀಬೇಕು ಅಂತ ನಿಮಗೆ ಅನ್ನೋದೇ ಇಲ್ವ? ಅವ್ರ ಬೆಳವಣಿಗೆ ನಮ್ಮ ಜವಾಬ್ದಾರಿ ಅಲ್ವ?'

'ನೀನು ಸಂಸಾರದ ಜವಾಬ್ದಾರಿ ಮಾತ್ರ ಯೋಚಿಸ್ತಿದ್ದೀಯ. ನನಗೆ ಸಾಮಾಜಿಕ ಜವಾಬ್ದಾರಿ ಇದೆ; ನೈತಿಕತೆ ಇದೆ.'

ಕಸ್ತೂರಿ ಬಾ ಒಡಲಿಗೆ ಕೆಂಡ ಬಿದ್ದ ಅನುಭವ.
ಒಡಲಲ್ಲೇ ಕೆಂಡ ಕರಗಿಸಿ ನೀರಾಗಿಸಿದರು.
ಕಣ್ಣ ಕಡಲಿಗೆ ಒಡಲ ನೀರು ತಂದುಕೊಂಡರು.
ಅಲೆಯುಕ್ಕಿ ಕೆನ್ನೆ ಮೇಲೆ ಚಿಮ್ಮಿತು ಮನಸು;
ಕೆಂಡ ಕರಗಿದ್ದರೂ ಬಿಸಿಯಾರದ ಮುನಿಸು
ದುಗುಡ ತುಂಬಿ ನಡಗುವ ದನಿಯಲ್ಲಿ ಕೇಳಿದರು:

'ಸಂಸಾರದ ಜವಾಬ್ದಾರೀನೂ ನೈತಿಕತೆ ಅಲ್ವ? ಸಾಮಾಜಿಕ ಜವಾಬ್ದಾರಿ ಒಂದೇನಾ ನೈತಿಕತೆ?'

ಕಸ್ತೂರ್ ಬಾ ದನಿ ನಡುಗುತ್ತಲೇ ಗಾಂಧಿಯವರನ್ನೂ ನಡುಗಿಸಿತು. ಯಾಕೆಂದರೆ, ಪತ್ನಿಯ ದನಿಯಲ್ಲಿದ್ದ ನಡುಕ ಅಂಜಿಕೆಯಾಗಿರಲಿಲ್ಲ; ಬಿಸಿನೀರ ಬುಗ್ಗೆಯಾಗಿತ್ತು. ಸಿಟ್ಟನ್ನು ಸೆರಗಲ್ಲಿ ಕಟ್ಟಿಕೊಂಡ ಸಂಕಟವಾಗಿತ್ತು. ಸಿಟ್ಟು–ಸಂಕಟಗಳ ಸ್ನೇಹದಲ್ಲಿ ಹುಟ್ಟಿನ ದಿಟ್ಟ ದನಿಯಾಗಿತ್ತು.

ಗಾಂಧಿ ಮೌನವಾದರು. ಆದರೆ ಕಸ್ತೂರ್ ಬಾ ಮತ್ತೆ ಮಾತಾಡಿದರು:

'ಹೇಳಿ ಬಾಪು, ಸಾಂಸಾರಿಕ ನೈತಿಕತೆ, ಸಾಮಾಜಿಕ ನೈತಿಕತೆ – ಎರಡನ್ನೂ ಬೆಸೆಯೋಕೆ ಸಾಧ್ಯ ಇಲ್ವ?'

ಗಾಂಧಿ ನೋಡುತ್ತ ನುಡಿದರು: 'ಸಾಧ್ಯ ಇರಬಹುದು. ಆದರೆ ಸಂಸಾರಕ್ಕೆ ಒಂದು ರೀತಿ ಅಂತರವೂ ಇರಬೇಕು.'

ಕಸ್ತೂರ್ ಬಾ ಥಟ್ಟನೆ ಹೇಳಿದರು: 'ಅಂತರ, ಕಂದರ ಆಗಬಾರದು ಬಾಪು.'

ಗಾಂಧಿ ತಲೆಯೆತ್ತಿದರು. ನೇರ ನುಡಿದರು: 'ನೋಡು ಕಸ್ತೂರ್, ಹರೀನ ಯಾವ ಕಾರಣಕ್ಕೂ ಇಂಗ್ಲೆಂಡಿಗೆ ಕಳಿಸೊಲ್ಲ. ಸ್ನೇಹಿತರ ಸಹಾಯಾನ ನನ್ನ ಸಂಸಾರಕ್ಕೆ ಬಳಸೊಲ್ಲ. ಇದು ನನ್ನ ಕಡೇ ಮಾತು.'

ಕಸ್ತೂರ್ ಬಾ ಹೇಳಿದರು: 'ಮಾತಲ್ಲ, ತೀರ್ಪು.'

ಇಷ್ಟು ಹೇಳಿ ಮಡಿಲಲ್ಲಿ ಕೆಂಡದ ಕಡಲು ಕಟ್ಟಿಕೊಂಡು ಹೊರಟರು ಕಸ್ತೂರ್ ಬಾ.

ಅವರು ಹೋದ ನಂತರ ಗಾಂಧಿ ತಮ್ಮ ಪೂರ್ವನಿಶ್ಚಿತ ತೀರ್ಪಿನ ಒಕ್ಕಣೆ ಬರೆದರು. ಹರಿಲಾಲ್ ಬದಲು ತಮ್ಮ ಚಿಕ್ಕಪ್ಪ ಜೀವನ್ ಚಂದ್ ಅವರ ಮೊಮ್ಮಗ ಛಗನ್‌ಲಾಲ್‌ನನ್ನು ಇಂಗ್ಲೆಂಡಿಗೆ ಕಳಿಸಲು ನಿರ್ಧರಿಸಿದರು.

ಛಗನ್‌ಲಾಲ್, ಜೀವನ್ ಚಂದ್ ಅವರ ಮಗ ಕುಶಲ್ ಚಂದ್ ಅವರ ಮಗನಾಗಿದ್ದ. ಆತನೂ ಫೀನಿಕ್ಸ್ ಆಶ್ರಮದಲ್ಲೇ ಇದ್ದ. ಆತನನ್ನು ಕರೆಸಿಕೊಂಡು ಇಂಗ್ಲೆಂಡಿಗೆ ಬ್ಯಾರಿಸ್ಟರ್ ವ್ಯಾಸಂಗಕ್ಕಾಗಿ ಕಳಿಸುವುದಾಗಿಯೂ ಆದರೆ ತನ್ನ ಷರತ್ತುಗಳಿಗೆ ಬದ್ಧವಾಗಿರಬೇಕೆಂದೂ ತಿಳಿಸಿದರು. ವ್ಯಾಸಂಗಾನಂತರ ಫೀನಿಕ್ಸ್ ಆಶ್ರಮಕ್ಕೆ ಬಂದು ಸೇವಾ ಮನೋಭಾವದಿಂದ ಬದುಕಬೇಕೆಂಬುದು ಮುಖ್ಯ ಷರತ್ತಾಗಿತ್ತು. ಛಗನ್ ಲಾಲ್ ಒಪ್ಪಿದ; ಇಂಗ್ಲೆಂಡಿಗೆ ಹೋದ. ಆದರೆ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟು ಬಂದ.

ಈಗ ಹರಿಲಾಲ್‌ಗೆ ಮತ್ತೆ ಆಸೆ ಹೂ ಬಿಟ್ಟಿತು. ಅಮ್ಮನ ಬಳಿ ನಿವೇದಿಸಿದ. ಅಮ್ಮನ ಅಸಹಾಯಕತೆಯನ್ನು ಅರ್ಥಮಾಡಿಕೊಂಡ. ತಾನೇ ಗಾಂಧೀಜಿ ಬಳಿಗೆ ಬಂದ. 'ಈಗ್ಲಾದ್ರೂ ನನ್ನ ಕಳಿಸ್ತೀರೊ ಇಲ್ವೊ?' ಅಂತ ಕೇಳಿದ.

'ಎಲ್ಲಿಗೆ?' – ಗಾಂಧಿ ಪ್ರಶ್ನೆ.

'ಇನ್ನೆಲ್ಲಿಗೆ? ಇಂಗ್ಲೆಂಡಿಗೆ? – ಹರಿಲಾಲ್ ಹರಿತ ಉತ್ತರ.

'ಇಂಗ್ಲೆಂಡಿನ ಆಸೆ ಬಿಟ್‌ಬಿಡು. ನಿನ್ನ ಶಿಕ್ಷಣ, ಸೇವೆ – ಎರಡೂ ಈ ಆಶ್ರಮದಲ್ಲೇ ನಡೀಲಿ' ಎಂದು ಗಾಂಧಿ ಸ್ಪಷ್ಟವಾಗಿ ಹೇಳಿದರು. ಹರಿಲಾಲ್ ಸುಮ್ಮನಾಗಲಿಲ್ಲ. ಅದೇ ಹರಿತವಾದ ದಾಟಿಯಲ್ಲಿ ದನಿಯೇರಿಸಿ ಹೇಳಿದ:

'ಸೇವೆ ನಡೀತಾನೇ ಇದ್ಯಲ್ಲ! ನಾನೂ ನನ್ ಹೆಂಡ್ತಿ ಇಬ್ರೂ ಇಲ್ಲಿ ನೀವು ಹೇಳ್ದಂತೇನೇ ಬದುಕ್ತಿದ್ದೀವಿ. ನಿಮ್ಮ ಹೋರಾಟದಲ್ಲಿ ನಾನೂ ಭಾಗಿ ಆಗಿದ್ದೀನಿ. ಹೋರಾಟ ಮಾಡಿ ನಿಮ್ಮ ಹಾಗೆ ನಾನೂ ಜೈಲಿಗ್ ಹೋಗಿದ್ದೀನಿ.'

ಆಗ ಗಾಂಧಿ ನುಡಿದರು. ;ಹೀಗಿದ್ರೇನೆ ತಂದೆಗೆ ತಕ್ಕ ಮಗ ಅನ್ನೋದು.'

'ತಂದೆಗೆ ತಕ್ಕ ಮಗ ಅನ್ನಿಸ್ಕೊಳ್ಳೋಕೆ ನಿಮ್ಮ ರೀತೀನೆ ನಾನೂ ಬ್ಯಾರಿಸ್ಟರ್ ಆಗ್ಬೇಕು. ಅಲ್ವ?' – ಹರಿಲಾಲ್ ನೇರ ಪ್ರಶ್ನಿಸಿದ; ಮತ್ತೆ ಕೇಳಿದ:

'ಹೇಳಿ ಅಪ್ಪ. ನೀವು ಬ್ಯಾರಿಸ್ಟರ್ ಆದ್ರಿ. ನಿಮ್ಮ ಮಗ ನಾನು ಆಗಬಾರ್ದ?'

ಗಾಂಧಿಗೆ ಕಸಿವಿಸಿಯಾಯಿತು. ಸಣ್ಣದಾಗಿ ಕೆರಳಿದರು:

'ಬೇರೆಯವರು ಕೊಡೋ ಸಹಾಯಾನ ನನ್ನ ಕುಟುಂಬಕ್ಕೆ ಬಳಸೋದು ನೈತಿಕತೆ ಅಲ್ಲ. ಅರ್ಥಮಾಡ್ಕೊ.'

'ಮಗನ ಶಿಕ್ಷಣಕ್ಕೆ ಅಡ್ಡಿ ಆಗೋದೂ ನೈತಿಕತೆ ಅಲ್ಲ.'

'ನನಗೆ ನೈತಿಕತೆಯ ಪಾಠ ಮಾಡ್ಬೇಡ.'

'ನಿಮ್ಮ ಹಟಕ್ಕೆ ಪ್ರತಿ ಮಾತೂ ಪಾಠ ಅನ್ಸುತ್ತೆ. ಅದು ನನ್ನ ತಪ್ಪಲ್ಲ.'

'ತಪ್ಪು–ಒಪ್ಪು ಯಾವುದು ಅಂತ ನನಗೆ ಚೆನ್ನಾಗಿ ಗೊತ್ತಾಗುತ್ತೆ. ಅತಿಯಾಗಿ ಆಡಬೇಡ ಹರಿ.'

'ಸರಿ; ಕೊನೇದಾಗ್ ಹೇಳಿ. ಛಗನ್‌ಲಾಲ್ ಬಿಟ್ಟುಬಂದಿರೊ ಜಾಗಕ್ಕೆ ನನ್ನ ಕಳಿಸ್ತೀರೊ ಇಲ್ವೊ?'

'ಇಲ್ಲ, ಕಳಿಸೊಲ್ಲ. ನಾನು ಚೆನ್ನಾಗಿ ಯೋಚ್ನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೀನಿ. ಆಶ್ರಮದಲ್ಲಿ ನಿನ್ನ ಜೊತೇಲೇ ಇದಾನಲ್ಲ, ಸೊರಾಬ್ಜಿ ಶಾಪುರ್ ಜಿ ಅಂತ. ಆತನ್ನ ಕಳಿಸ್ತೀನಿ. ಆತ ಪಾರ್ಸಿ, ಅಲ್ಪಸಂಖ್ಯಾತ. ಅಂಥವರಿಗೆ ಸಹಾಯ ಮಾಡೋದು ನನ್ನ ನೈತಿಕ ಜವಾಬ್ದಾರಿ.'

'ನಿಮ್ಮನ್ನ ಕೇಳಿ ಪ್ರಯೋಜನ ಇಲ್ಲ. ಇಲ್ಲಿರೋದೂ ಪ್ರಯೋಜನ ಇಲ್ಲ' ಎಂದು ಹೇಳಿದ ಹರಿಲಾಲ್ ಹೊರಟವನು ಮತ್ತೆ ತಿರುಗಿ ಹೇಳಿದ:

'ಬೆಳವಣಿಗೆ ಹೆಸರಲ್ಲಿ ಬಂಧಿ ಆಗಿರಲಾರೆ. ಬರ್ತೀನಿ.'

ಇದೇ ಮಾತನ್ನು ಹರಿಲಾಲ್ ಕಸ್ತೂರ್‌ಬಾಗೂ ಹೇಳಿದ. ಮರಳಿ ಊರಿಗೆ ಹೋಗುವ ನಿರ್ಧಾರ ಕೈಗೊಂಡ.

ಅಡಕತ್ತರಿಯಲ್ಲಿ ಸಿಕ್ಕಿದ ಅಮ್ಮ
ಹರಿಲಾಲನದು ದಂಡನಂಥ ಮಾತು
ಮೌನವಾದರು ತಾಯಿ ತತ್ತರಿಸಿ ಕೂತು!

* * *

(ಸಶೇಷ)